ಕರ್ನಾಟಕ ಸರ್ಕಾರ

# ಜಿಲ್ಲಾ ಪಂಚಾಯತ್ ತುಮಕೂರು

ಜಿಲ್ಲಾ ಆಯುಷ್ ಅಧಿಕಾರಿಗಳ ಕಾರ್ಯಾಲಯ, ಜಿಲ್ಲಾ ಆಸ್ಪತ್ರೆ ಆವರಣ, ಬಿ.ಹೆಚ್ ರಸ್ತೆ, ತುಮಕೂರು

E-mail :dao.tumkur09@gmail.com Telephone no:0816-2252367

ಸಂಖ್ಯೆ:ಜಿಆಕತು/53/ಸಿಎಸ್ಎಸ್ ನೇಮಕಾತಿ/2024-25 ದಿನಾಂಕ: 10-02-2025

## ಪ್ರಕಟಣೆ

ತುಮಕೂರು ಜಿಲ್ಲಾ ಆಯುಷ್ ಕಛೇರಿ ವ್ಯಾಪ್ತಿಯಲ್ಲಿ ಕೇಂದ್ರ ಪುರಸ್ಕೃತ ಯೋಜನೆಯ ರಾಷ್ಟ್ರೀಯ ಆಯುಷ್ ಅಭಿಯಾನದಡಿ ಮೇಲ್ದರ್ಜೆಗೇರಿಸಲಾದ ಈ ಕೆಳಕಂಡ ಆಸ್ಪತ್ರೆಗಳಲ್ಲಿ ಖಾಲಿ ಇರುವ ತಾತ್ಕಾಲಿಕ ಗುತ್ತಿಗೆ ತಜ್ಞವೈದ್ಯರು ಹಾಗೂ ಇತರೆ ಹುದ್ದೆಗಳನ್ನು ಮೆರಿಟ್ ಹಾಗೂ ಮೀಸಲಾತಿಯನ್ವಯ ಸಂದರ್ಶನದ ಮೂಲಕ ಗುತ್ತಿಗೆ ಆಧಾರದ ಮೇಲೆ ತಾತ್ಕಾಲಿಕವಾಗಿ ಆಯ್ಕೆ ಸಮಿತಿಯ ನೇಮಕ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರಸಂ | ಹುದ್ದೆಗಳು ಖಾಲಿ ಇರುವ ಸ್ಥಳ | ಹುದ್ದೆಗಳ ಹೆಸರು | ಸಂಖ್ಯೆ | ಸಂಚಿತ ವೇತನ ಮಾಹೆಯಾನ | ಕನಿಷ್ಠ ವಿದ್ಯಾರ್ಹತೆ | ಮೀಸಲಾತಿ/ ಸಮತಳ ಮೀಸಲಾತಿ |
|---|---|---|---|---|---|---|
| 1 | ಸರ್ಕಾರಿ ಆಯುರ್ವೇದ ಆಸ್ಪತ್ರೆ, ತಿಪಟೂರು ಮತ್ತು ಮಧುಗಿರಿ | ತಜ್ಞವೈದ್ಯರು (ಆಯು) | 02 | ರೂ.60,000/- + ರೂ.5,000/- (ಸ್ನಾತಕೋತ್ತರ ಭತ್ಯೆ) = ಒಟ್ಟು ರೂ.65,000/- | ಕನಿಷ್ಠ 03 ವರ್ಷಗಳ ಅನುಭವದೊಂದಿಗೆ ಬಿಎಎಂಎಸ್, ಎಂ.ಎಸ್ ಶಲ್ಯತಂತ್ರ ಅಥವಾ ಎಂ.ಡಿ ಪಂಚಕರ್ಮ/ಕಾಯಚಿಕಿತ್ಸಾ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಹೊಂದಿರತಕ್ಕದ್ದು | ಪ.ಜಾ/ಸಾ.ಅ ಸಾ.ಅ/ಮ.ಅ |
| 2 | ತಾಲ್ಲೂಕು ಆಯುಷ್ ಆಸ್ಪತ್ರೆ, ಮಧುಗಿರಿ | ತಜ್ಞವೈದ್ಯರು (ಹೋ) | 01 | ರೂ.60,000/- + ರೂ.5,000/- (ಸ್ನಾತಕೋತ್ತರ ಭತ್ಯೆ) = ಒಟ್ಟು ರೂ.65,000/- | ಕನಿಷ್ಠ 03 ವರ್ಷಗಳ ಅನುಭವದೊಂದಿಗೆ ಬಿ.ಹೆಚ್.ಎಂ.ಎಸ್, ಎಂ.ಎಸ್/ಎಂ.ಡಿ ಸ್ನಾತಕೋತ್ತರ ಪದವಿ ಹೊಂದಿರತಕ್ಕದ್ದು. ಒಂದು ವೇಳೆ ಸ್ನಾತಕೋತ್ತರ ಪದವೀಧರರು ಲಭ್ಯವಿಲ್ಲದಿದ್ದರೆ ಪಿ.ಜಿ.ಅಲೋಯೆನ್ಸ್ ರಹಿತವಾಗಿ ಬಿ.ಹೆಚ್.ಎಂ.ಎಸ್, ಸ್ನಾತಕ ಪದವಿ ಪರಿಗಣಿಸಲಾಗುವುದು | ಸಾ.ಅ/ಸಾ.ಅ |
| 3 | ತಾಲ್ಲೂಕು ಆಯುಷ್ ಆಸ್ಪತ್ರೆ, ಮಧುಗಿರಿ | ಕ್ಷಾರಸೂತ್ರ ಅಟೆಂಡರ್ | 01 | ರೂ.19,425/- | ಕನಿಷ್ಠ 10ನೇ ತರಗತಿ ವಿದ್ಯಾರ್ಹತೆ ಹೊಂದಿರತಕ್ಕದ್ದು ಹಾಗೂ ಆಯುಷ್ ಆಸ್ಪತ್ರೆ/ಚಿಕಿತ್ಸಾಲಯಗಳಲ್ಲಿ ಕನಿಷ್ಠ 02 ವರ್ಷ ಕರ್ತವ್ಯ ನಿರ್ವಹಿಸಿರುವ ಅನುಭವ ಹೊಂದಿರತಕ್ಕದ್ದು. | ಸಾ.ಅ/ಸಾ.ಅ |
| 4 | ಸರ್ಕಾರಿ ಆಯುರ್ವೇದ ಆಸ್ಪತ್ರೆ, ತಿಪಟೂರು ಮತ್ತು ಚಿಕ್ಕನಾಯಕನಹಳ್ಳಿ | ಫಾರ್ಮಾಸಿಸ್ಟ್ | 04 | ರೂ.28,928/- | ಬ್ಯಾಚುಲರ್ ಆಫ್ ಫಾರ್ಮಸಿ (ಬಿ.ಫಾರ್ಮಾ) ಪದವಿಯ ಜೊತೆಗೆ ಆಯುಷ್ ಆಸ್ಪತ್ರೆ/ ಚಿಕಿತ್ಸಾಲಯಗಳಲ್ಲಿ ಕನಿಷ್ಠ 02 ವರ್ಷ ಕರ್ತವ್ಯ ನಿರ್ವಹಿಸಿರುವ ಅನುಭವ ಹೊಂದಿರತಕ್ಕದ್ದು. ಒಂದು ವೇಳೆ ಬಿ.ಫಾರ್ಮಾ ಅಭ್ಯರ್ಥಿಯು ದೊರೆಯದ ಪಕ್ಷದಲ್ಲಿ ಕನಿಷ್ಠ 02 ವರ್ಷ ಅನುಭವವಿರುವ ಡಿಪ್ಲೋಮೊ ಇನ್ ಫಾರ್ಮಸಿ (ಡಿ.ಫಾರ್ಮಾ) ಅಭ್ಯರ್ಥಿಗಳನ್ನು ಪರಿಗಣಿಸುವುದು. ಕಂಪ್ಯೂಟರ್ ಜ್ಞಾನ ಹೊಂದಿರಬೇಕು | ಪ.ಜಾ/ಸಾ.ಅ ಸಾ.ಅ/ಮ.ಅ ಪ.ಪಂ/ಗ್ರಾ.ಅ ಸಾ.ಅ/ಅಂ.ಅ |
| 5 | ಸರ್ಕಾರಿ ಆಯುರ್ವೇದ ಆಸ್ಪತ್ರೆ, ಚಿಕ್ಕನಾಯಕನಹಳ್ಳಿ | ಮಸಾಜಿಸ್ಟ್ | 01 | ರೂ.19,425/- | ಕನಿಷ್ಠ 10ನೇ ತರಗತಿ ವಿದ್ಯಾರ್ಹತೆ ಹೊಂದಿರತಕ್ಕದ್ದು ಹಾಗೂ ಆಯುಷ್ ಆಸ್ಪತ್ರೆ/ಚಿಕಿತ್ಸಾಲಯಗಳಲ್ಲಿ ಕನಿಷ್ಠ 02 ವರ್ಷ ಕರ್ತವ್ಯ ನಿರ್ವಹಿಸಿರುವ ಅನುಭವ ಹೊಂದಿರತಕ್ಕದ್ದು. | ಸಾ.ಅ/ಸಾ.ಅ |

**ಸೂಚನೆ:**

ಪ.ಜಾ- ಪರಿಶಿಷ್ಟ ಜಾತಿ ಅಭ್ಯರ್ಥಿ, ಸಾ.ಅ- ಸಾಮಾನ್ಯ ಅಭ್ಯರ್ಥಿ, ಪ.ಪಂ- ಪರಿಶಿಷ್ಟ ಪಂಗಡ ಅಭ್ಯರ್ಥಿ

ಗ್ರಾ.ಅ- ಗ್ರಾಮೀಣ ಅಭ್ಯರ್ಥಿ, ಅಂ.ಅ- ಅಂಗವಿಕಲ ಅಭ್ಯರ್ಥಿ ಮ.ಅ- ಮಹಿಳಾ ಅಭ್ಯರ್ಥಿ

Scanned with CamScanner

**ಈ ಗುತ್ತಿಗೆ ಆಧಾರದ ತಾತ್ಕಾಲಿಕ ನೇಮಕಾತಿಯು ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.**

**ವಯೋಮಿತಿ:-**

ದಿ:01-01-2025ಕ್ಕೆ ಸಾಮಾನ್ಯ ಅಭ್ಯರ್ಥಿಗಳಿಗೆ ಕನಿಷ್ಠ-18 ವರ್ಷ ಹಾಗೂ ಗರಿಷ್ಠ -35 ವರ್ಷ, ಪ.ಜಾತಿ ಮತ್ತು ಪ.ಪಂಗಡ ಅಭ್ಯರ್ಥಿಗಳಿಗೆ ಕನಿಷ್ಠ-18 ವರ್ಷ ಗರಿಷ್ಠ-40 ವರ್ಷ, ಪ್ರ-1, 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳಿಗೆ ಕನಿಷ್ಠ-18 ವರ್ಷ ಗರಿಷ್ಠ-38 ವರ್ಷ ಮೀರಿರಬಾರದು.

1. ಜಾತಿ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕಕ್ಕೆ ಚಾಲ್ತಿಯಲ್ಲಿರುವಂತೆ ಸಂಬಂಧಿಸಿದ ತಹಶೀಲ್ದಾರರಿಂದ ಪಡೆದಿರಬೇಕು.
2. ಅರ್ಜಿಯಲ್ಲಿ ಭರ್ತಿ ಮಾಡಿರುವ ಮೀಸಲಾತಿಯನ್ನು ಮಾತ್ರ ಪರಿಗಣಿಸಲಾಗುವುದು. ಹೆಚ್ಚಿನ ವಿದ್ಯಾರ್ಹತೆ ಅಥವಾ ತದನಂತರದ ಮೀಸಲಾತಿ ಪರಿಗಣನೆಗೆ ಅವಕಾಶವಿರುವುದಿಲ್ಲ. ಒಮ್ಮೆ ಸಲ್ಲಿಸಿದ ಅರ್ಜಿಯಲ್ಲಿ ಯಾವುದೇ ಬದಲಾವಣೆಗೆ ಅವಕಾಶವಿರುವುದಿಲ್ಲ.
3. ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಬಯಸಿದಲ್ಲಿ ಹುದ್ದೆವಾರು ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಒಂದೇ ಅರ್ಜಿಯಲ್ಲಿ ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ ಪಕ್ಷದಲ್ಲಿ ಅರ್ಜಿಗಳು ಸ್ವಯಂ ತಿರಸ್ಕೃತಗೊಳ್ಳಲಿದೆ.
4. ಜನ್ಮ ದಿನಾಂಕ ದೃಢೀಕರಣ ಪತ್ರ:- ಎಸ್.ಎಸ್.ಎಲ್.ಸಿ/ಜನನ ಪ್ರಮಾಣ ಪತ್ರ/ತತ್ಸಮಾನ ವಿದ್ಯಾರ್ಹತೆಯ ಅಂಕಪಟ್ಟಿ ಅಥವಾ ಶಾಲಾ ವರ್ಗಾವಣೆ ಪ್ರಮಾಣ ಪತ್ರ.
5. ಗ್ರಾಮೀಣ ಅಭ್ಯರ್ಥಿ ಮೀಸಲಾತಿ:- 01 ರಿಂದ 10ನೇ ತರಗತಿ ವರೆಗೆ ಗ್ರಾಮೀಣ ಪ್ರದೇಶದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಪ್ರಮಾಣ ಪತ್ರವನ್ನು ಮುಖ್ಯೋಪಾಧ್ಯಯರಿಂದ ಪಡೆದು ಸಂಬಂದಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲು ರುಜು ಮಾಡಿಸಿರತಕ್ಕದ್ದು.
6. ಅಂಗವಿಕಲ ಅಭ್ಯರ್ಥಿ ಮೀಸಲಾತಿ:- ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ/ 115/ ಸೇನನಿ/ 2005, ದಿ:19-11-2005 ರಲ್ಲಿ ನಿಗಧಿಪಡಿಸಿರುವ ನಮೂನೆಯಲ್ಲಿ ಅಂಗವಿಕಲ ಪ್ರಮಾಣ ಪತ್ರವನ್ನು ಸರ್ಕಾರಿ ಆಸ್ಪತ್ರೆಗಳಲ್ಲಿನ ವೈದ್ಯಕೀಯ ಮಂಡಳಿಯಿಂದ ಪಡೆದಿರಬೇಕು.
7. ತಜ್ಞವೈದ್ಯರ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕಡ್ಡಾಯವಾಗಿ ಸಂಬಂಧಿಸಿದ ನೊಂದಣಿ ಪ್ರಾಧಿಕಾರಿಗಳಿಂದ ನೊಂದಣಿ ಮಾಡಿಸಿರಬೇಕು. ತಮ್ಮ ವಿದ್ಯಾರ್ಹತೆಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಅನುಭವ ಇದ್ದಲ್ಲಿ ಪ್ರಮಾಣ ಪತ್ರಗಳನ್ನು ಲಗತ್ತಿಸಿ ಸಲ್ಲಿಸಬೇಕು.
8. ಔಷಧ ವಿತರಕರ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕಡ್ಡಾಯವಾಗಿ ಸಂಬಂಧಿಸಿದ ಪ್ರಾಧಿಕಾರದಿಂದ ನೊಂದಣಿ ಮಾಡಿಸಿರಬೇಕು. ನೊಂದಣಿ ಮಾಡಿಸಿರುವ ಪ್ರತಿಯನ್ನು ಲಗತ್ತಿಸಬೇಕು.

ಆಸಕ್ತ ಅಭ್ಯರ್ಥಿಗಳು ಅರ್ಜಿಗಳನ್ನು ದಿ:17-02-2025 ರಿಂದ ಜಿಲ್ಲಾ ಆಯುಷ್ ಕಛೇರಿ, ತುಮಕೂರು ಇಲ್ಲಿಂದ ಪಡೆಯಬಹುದಾಗಿದೆ. ಭರ್ತಿ ಮಾಡಿದ ಅರ್ಜಿಗಳನ್ನು ಕೊನೆಯ ದಿನಾಂಕ:17-03-2025ರ ಸಂಜೆ 5.00 ಗಂಟೆಯೊಳಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಈ ಕಛೇರಿಯ ವಿಳಾಸಕ್ಕೆ ಸ್ವೀಕೃತವಾಗುವಂತೆ ಕಳುಹಿಸಬೇಕು. ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ತುಮಕೂರು ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/-
ಸದಸ್ಯ ಕಾರ್ಯದರ್ಶಿ/
ಜಿಲ್ಲಾ ಆಯುಷ್ ಅಧಿಕಾರಿಗಳು
ಜಿಲ್ಲಾ ಮಟ್ಟದ ಆಯುಷ್ ನೇಮಕಾತಿ ಸಮಿತಿ
ತುಮಕೂರು

Scanned with CamScanner

**ಕರ್ನಾಟಕ ಸರ್ಕಾರ**
**ಜಿಲ್ಲಾ ಪಂಚಾಯತ್ ತುಮಕೂರು**
ಜಿಲ್ಲಾ ಆಯುಷ್ ಅಧಿಕಾರಿಗಳ ಕಾರ್ಯಾಲಯ, ಜಿಲ್ಲಾ ಆಸ್ಪತ್ರೆ ಆವರಣ, ಬಿ.ಹೆಚ್ ರಸ್ತೆ, ತುಮಕೂರು
E-mail :dao.tumkur09@gmail.com Telephone No:0816-2252367

ಸಂಖ್ಯೆ:ಜಿಆಕತು/53/ಸಿಎಸ್ಎಸ್‌ನೇಮಕಾತಿ/2024–25 ದಿನಾಂಕ: 17–02–2025

**ತಿದ್ದುಪಡಿ ಪ್ರಕಟಣೆ**

ದಿನಾಂಕ: 14–02–2025ರ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ **ಹೊಸ ನೇಮಕಾತಿಗೆ** ಸಂಬಂಧಿಸಿದಂತೆ ಮಾಹೆಯಾನ ಸಂಚಿತ ವೇತನವನ್ನು ತಜ್ಞ ವೈದ್ಯರು– ರೂ.52,550+5000= ರೂ.57,550, ಫಾರ್ಮಾಸಿಸ್ಟ್ ರೂ.27,550, ಮಸಾಜಿಸ್ಟ್, ಕ್ಷಾರಸೂತ್ರ ಅಟೆಂಡರ್ ಮತ್ತು ಸ್ತ್ರೀ ರೋಗ ಅಟೆಂಡರ್ ಹುದ್ದೆಗಳಿಗೆ ರೂ.18,500/– ಗಳು ಎಂದು ತಿದ್ದಿ ಓದಿಕೊಳ್ಳುವುದು. ಉಳಿದಂತೆ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/–
ಸದಸ್ಯ ಕಾರ್ಯದರ್ಶಿ/
ಜಿಲ್ಲಾ ಆಯುಷ್ ಅಧಿಕಾರಿಗಳು
ಜಿಲ್ಲಾ ಮಟ್ಟದ ಆಯುಷ್ ನೇಮಕಾತಿ ಸಮಿತಿ
ತುಮಕೂರು